( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ಅಸಲು ದಾವೆ ನಂ.101/2013

ದಿನಾಂಕಃ **11-09-2024,** ಡಿ **ಡಬ್ಲ್ಯೂ-1**

| | |
|---|---|
| ಹೆಸರುಃ | ಆರ್ ಟಿ ಶ್ರೀನಿವಾಸ |
| ತಂದೆಯ ಹೆಸರುಃ | ಲೇಟ್ ತಮ್ಮೇಗೌಡ |
| ವಯಸ್ಸುಃ | **55** ವರ್ಷ |
| ವೃತ್ತಿಃ | ವ್ಯವಸಾಯ |
| ವಾಸಃ | ರುದ್ರಪಟ್ಟಣ ಗ್ರಾಮ |

**8** ಮತ್ತು **9**ನೇ ಪ್ರತಿವಾದಿಯರ ಪರ ಜಿ ಪಿ ಎ ಹೋಲ್ಡರ್ ರವರ ಮುಖ್ಯ ವಿಚಾರಣೆ : ಶ್ರೀ ಆರ್ ಕೆ ಎಂ ವಕೀಲರಿಂದಃ

ಈ ಪ್ರಕರಣದಲ್ಲಿ ನನ್ನ ಮುಖ್ಯ ವಿಚಾರಣೆಯ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದರ ಪ್ರತಿ ಪುಟದಲ್ಲಿರುವ ಸಹಿಯೂ ನನ್ನದೇ ಆಗಿರುತ್ತದೆ.

1. ದಿಃ01-08-2024 ರ ನೋಟರಿ ಸಾಮಾನ್ಯ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಡಿ -1 ಎಂದು ಗುರುತಿಸಲಾಯಿತು.

2. ದಿಃ18-05-2016ರ ಎರಡು ಕ್ರಯಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ -2 ಮತ್ತು 3 ಎಂದು ಗುರುತಿಸಲಾಯಿತು.

3. ದಾವ ಆಸ್ತಿಗಳ 6 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ -4 ರಿಂದ 9 ಎಂದು ಗುರುತಿಸಲಾಯಿತು.

4. ಎರಡು ಖಾತಾ ಬದಲಾವಣೆ ವಹಿಗಳ ದೃಡೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ - 10 ಮತ್ತು 11 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶವನ್ನು ಕೋರಿದ್ದು ಕಾಲವಕಾಶ ನೀಡಲಾಯಿತು.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

(ರಘು ಎಂ.)
**2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ಅರಕಲಗೂಡು**